


ಪಾವೆಲ್ ಬಜೋವ್

ಬೆಳ್ಳಿಯ ಪುಟ್ಟ ಗೊರಸು

ಪಾವೆಲ್ ಬಜೋವ್


ಬೆಳ್ಳಿಯ ಪುಟ್ಟ ಗೊರಸು

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್
ಚಿತ್ರಗಳು: ಎ. ಪ್ಲಾಕ್ಸಿನ್

ರಾದುಗ ಪ್ರಕಾಶನ
ಮಾಸ್ಕೋ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ
ಬೆಂಗಳೂರು





ಒಮ್ಮೆ ನಮ್ಮ ಹಳ್ಳಿಯಲ್ಲಿ ಒಬ್ಬ ಮುದುಕ ವಾಸವಾಗಿದ್ದ. ಅವನ ಹೆಸರು ಕೊಕೊವಾನ್ಯ ಅಂತ. ಅವನ ಮನೆಯಲ್ಲಿ ಅವನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಆದ್ದರಿಂದ ಅವನು ಯಾವುದಾದರೂ ಒಂದು ಅನಾಥ ಮಗುವನ್ನು ತನ್ನ ಗುಡಿಸಿಲಿಗೆ ಕರೆತಂದು ಅದನ್ನು ತನ್ನ ಮಗುವನ್ನಾಗಿಯೇ ಸಾಕಬೇಕು ಅಂತ ಅಂದುಕೊಂಡ.

ಅಂಥ ಯಾವುದಾದರೂ ಅನಾಥ ಮಗು ಗೊತ್ತೆ ಎಂದು ಅವನು ಅಕ್ಕಪಕ್ಕದವರನ್ನು ಕೇಳಿದ. ಅವರು ಹೇಳಿದರು: “ಗ್ರಿಗೋರಿ ಪೊತಾಪೊವ್‌ನ ಮಕ್ಕಳಿದ್ದಾರೆ. ಈಚೆಗೆ ಅವನು ಅವರನ್ನೆಲ್ಲ ಅನಾಥರನ್ನಾಗಿ ಗ್ಲೀಂಕದಲ್ಲಿ ಬಿಟ್ಟು ಹೋಗಿದ್ದಾನೆ. ಹಳ್ಳಿಯ ಕಾರಭಾರಿ ಹಿರಿಯ ಹೆಣ್ಣು ಮಕ್ಕಳನ್ನು ಜಹಗೀರುದಾರನ ಹೊಲಿಗೆ ಕರ್ಮಶಾಲೆಗೆ ಕಳಿಸಿಕೊಟ್ಟ. ಆರು ವರ್ಷದ ಒಬ್ಬ ಹುಡುಗಿಯಷ್ಟೆ ಉಳಿದುಕೊಂಡಿದ್ದಾಳೆ.

ಅವಳು ಯಾರಿಗೂ ಬೇಡವಾಗಿದ್ದಾಳೆ. ಅವಳನ್ನು ಬೇಕಾದರೆ ನೀನು ತೆಗೆದುಕೊಳ್ಳ ಬಹುದು."

ಆದರೆ ಕೊಕೊವಾನ್ಯ ಹೇಳಿದ: "ಹೆಣ್ಣು ಮಗುವನ್ನು ಕರೆದುಕೊಂಡು ನಾನು ಏನು ಮಾಡಲಿ? ಗಂಡು ಮಗುವಾಗಿದ್ದರೆ, ಚೆನ್ನಾಗಿರುತ್ತಿತ್ತು. ನಾನು ಅವನಿಗೆ ನನ್ನ ವೃತ್ತಿ ಹೇಳಿಕೊಡುತ್ತಿದ್ದೆ. ದೊಡ್ಡವನಾದ ಮೇಲೆ ಅವನೂ ನನಗೆ ಸಹಾಯ ವಾಗುತ್ತಿದ್ದ. ಆದರೆ ಹೆಣ್ಣು ಮಗುವನ್ನು ಕಟ್ಟಿಕೊಂಡು ನಾನೇನು ಮಾಡಲಿ? ಅವಳಿಗೆ ನಾನು ಏನು ಹೇಳಿಕೊಡಲಿ?"

ಹಾಗೇನೋ ಅಂದ, ಆದರೆ ಮತ್ತೆ ಯೋಚನೆ ಮಾಡಿದ, ಆಮೇಲೆ ಹೇಳಿದ: "ನನಗೇನು ಗ್ರಿಗೋರಿ ಮತ್ತವನ ಸದ್ಗೃಹಿಣಿ ಗೊತ್ತಿಲ್ಲವೇ? ಅವರು ಚೆನ್ನಾಗಿಯೇ ಕೆಲಸ ಮಾಡುತ್ತಿದ್ದರು, ಒಳ್ಳೆಯ ಸಂತಸದ ಜೀವನ ನಡೆಸುತ್ತಿದ್ದರು. ಈ ಹುಡು ಗಿಯೂ ಅವರ ತರಹವೇ ಇದ್ದರೆ ನನ್ನ ಗುಡಿಸಿಲಿನಲ್ಲೂ ಅವಳೊಂದಿಗೆ ಜೀವನ ನೀರಸವೇನೂ ಆಗಿರುವುದಿಲ್ಲ. ಸರಿ, ನಾನವಳನ್ನು ತೆಗೆದುಕೊಳ್ಳುತ್ತೇನೆ. ಆದರೆ ಅವಳು ಬರುತ್ತಾಳೋ ಇಲ್ಲವೋ, ಯಾರಿಗೆ ಗೊತ್ತು?"

"ಅಯ್ಯೋ, ಬರದೇ ಏನು. ಅವಳ ಜೀವನವೇನೂ ಅಷ್ಟು ಚೆನ್ನಾಗಿಲ್ಲ" ಎಂದರು ಅಕ್ಕಪಕ್ಕದವರು. "ಹಳ್ಳಿಯ ಕಾರಭಾರಿಯು ಗ್ರಿಗೋರಿಯ ಮನೆಯನ್ನು ಯಾವನೋ ಒಬ್ಬ ಬಡ ಪಿಶಾಚಿಗೆ ಕೊಟ್ಟು ಈ ಅನಾಥ ಹುಡುಗಿಯನ್ನು ಬೆಳೆಯುವವರೆಗೂ ನೋಡಿಕೊಳ್ಳುವಂತೆ ಹೇಳಿದ್ದಾನೆ. ಆದರೆ ಆ ಬಡವನಿಗೇ ಒಂದು ಡಜನ್ ಮಕ್ಕಳಿದ್ದಾರೆ. ತಮ್ಮ ಹೊಟ್ಟೆ ತುಂಬಿಸಿಕೊಳ್ಳಲೇ ಅವರಿಗೆ ಸಾಕಷ್ಟು ವರಮಾನ ಇಲ್ಲ. ಮನೆಯೊಡತಿ ಈ ಅನಾಥ ಮಗುವಿಗೆ ತುಂಬ ಕಾಟ ಕೊಡುತ್ತಿದ್ದಾಳೆ. ಒಂದೊಂದು ಚೂರು ಆಹಾರ ಕೊಟ್ಟಾಗಲೂ ಹಿಡಿಹಿಡಿ ಶಾಪ ಹಾಕುತ್ತಾಳೆ. ಮಗುವೇನೋ ಚಿಕ್ಕವಳೇ. ಆದರೆ ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತಾಳೆ. ಪಾಪ, ತುಂಬ ನೊಂದುಕೊಳ್ಳುತ್ತಿದ್ದಾಳೆ. ಇಂಥ ದುಸ್ಸಹವಾದ ಜೀವನವನ್ನು ಬಿಟ್ಟು ಬರೊಲ್ಲ ಅಂತೀಯಾ? ನೀನು ಅವಳ ಜೊತೆ ಸ್ವಲ್ಪ ವಾತ್ಸಲ್ಯದಿಂದ ಮಾತನಾಡಿದರೆ ಸಾಕು. ನಿನ್ನನ್ನು ತುಂಬ ಇಷ್ಟಪಡು ತ್ತಾಳೆ."



"ಹಾಗೇ ಆಗಲಿ" ಕೊಕೊವಾನ್ಯ ಹೇಳಿದ. "ನಾನು ಅವಳ ಜೊತೆ ಏನಾದರೂ ಪ್ರೀತಿಯಿಂದ ಮಾತನಾಡುತ್ತೇನೆ."

ಮುಂದಿನ ರಜಾ ದಿನ ಬಂದಾಗ ಅವನು ಆ ಅನಾಥ ಹುಡುಗಿ ವಾಸಿಸುತ್ತಿದ್ದ ಮನೆಗೆ ಹೋದ. ಮನೆ ತುಂಬ ಮಕ್ಕಳು, ದೊಡ್ಡವರು ಚಿಕ್ಕವರು. ಪುಟ್ಟ ಹುಡುಗಿಯೊಬ್ಬಳು ಮೂಲೆಯಲ್ಲಿ ಒಲೆಯ ಬಳಿ ಕಂದು ಬೆಕ್ಕೊಂದರ ಲಾಲನೆ ಮಾಡುತ್ತ ಕುಳಿತುಕೊಂಡಿದ್ದಳು. ಹುಡುಗಿ ಪುಟ್ಟದಾಗಿದ್ದಳು, ಅವಳ ಬೆಕ್ಕೂ ಪುಟ್ಟದಾಗಿತ್ತು. ಅದು ಎಷ್ಟು ತೆಳುವಾಗಿ ಕೊಳಕಾಗಿ ಇದ್ದಿತೆಂದರೆ ಯಾರೇ ಆಗಲಿ ಅದನ್ನು ಮನೆಯಲ್ಲಿಟ್ಟುಕೊಳ್ಳುವರೇ ಎಂದು ಆಶ್ಚರ್ಯಪಡಬೇಕಿತ್ತು. ಹುಡುಗಿ ಬೆಕ್ಕಿನ ಬೆನ್ನು ಸವರುತ್ತಿದ್ದಳು. ಅದು ಸಂತಸದಿಂದ ಪರ್‌ಗುಟ್ಟುತ್ತಿತ್ತು. ಆ ಸದ್ದನ್ನು ಗುಡಿಸಿಲಿನಲ್ಲೆಲ್ಲ ಕೇಳಬಹುದಿತ್ತು.

ಕೊಕೊವಾನ್ಯ ಆ ಹುಡುಗಿಯನ್ನು ಕಂಡು ಮನೆಯೊಡತಿಯನ್ನು ಕೇಳಿದ: "ಇವಳೇನಾ ಗ್ರಿಗೋರಿಯ ಪೊದರ್ಯೋಂಕ?*"

"ಹೌದು, ಅವಳೇ" ಮನೆಯೊಡತಿ ಉತ್ತರಿಸುತ್ತಾಳೆ. "ಅವಳಿಗೆ ಹೊಟ್ಟೆಗೆ ಹಾಕುವುದು ಸಾಲದೂಂತ ನಮಗೆ ಆ ಕೆಟ್ಟ ಕೊಳಕು ಪ್ರಾಣಿಗೂ ಹೊಟ್ಟೆಗೆ ಹಾಕಬೇಕಾಗಿದೆ. ಅದನ್ನು ಓಡಿಸೋಕೇ ಆಗುತ್ತಿಲ್ಲ. ಮನೆ ಮಕ್ಕಳನ್ನೆಲ್ಲ ಪರಚುತ್ತೆ. ಆದರೂ ನೋಡಿ, ನಾನದಕ್ಕೆ ಆಹಾರ ಕೊಡಬೇಕು!"

"ಇಲ್ಲ, ನಿನ್ನ ಮಕ್ಕಳು ಎಲ್ಲೋ ಅದನ್ನು ಪೀಡಿಸುತ್ತಾರೆ ಅಂತ ಕಾಣುತ್ತೆ. ಅದಕ್ಕೇ ಅದು ಪರಚುತ್ತೆ" ಕೊಕೊವಾನ್ಯ ಗಂಭೀರವಾಗಿ ಹೇಳಿದ. "ನೋಡು ಅದು ಅವಳ ಬಳಿ ಇದ್ದಾಗ ಮಾತ್ರ ಪ್ರೀತಿಯಿಂದ ಪರ್‌ಗುಟ್ಟುತ್ತಲ್ಲ!" ಆಮೇಲೆ ಅವನು ಹುಡುಗಿಯ ಕಡೆಗೆ ತಿರುಗಿ ಹೇಳಿದ: "ಏನಮ್ಮ, ಮುದ್ದು ಪೊದರ್ಯೋಂಕ, ನನ್ನ ಜೊತೆ ಬಂದು ನನ್ನ ಗುಡಿಸಿಲಿನಲ್ಲಿ ವಾಸಮಾಡೋಕೆ ನಿನಗೆ ಇಷ್ಟವಾ?"

ಹುಡುಗಿ ಆಶ್ಚರ್ಯಪಟ್ಟಳು:

---

*ಪೊದರ್ಯೋಂಕ – ಬಳುವಳಿ. – ಅನು.



"ನಿನಗೆ ಹೇಗೆ ಗೊತ್ತಾಯಿತು, ಅಜ್ಜ, ನನ್ನ ಹೆಸರು ದರ್ಯೋಂಕ ಅಂತ?"

"ಸುಮ್ಮನೆ ಹಾಗೆ ಹೇಳಿದೆನಮ್ಮ" ಅವನೆಂದ. "ನಾನೇನೂ ಯೋಚನೆ ಮಾಡಿ ಹೇಳಲಿಲ್ಲ. ನನಗೇನೂ ಗೊತ್ತಿರಲಿಲ್ಲ. ಸುಮ್ಮನೆ ಹಾಗೇ ಈ ಹೆಸರು ಮನಸ್ಸಿಗೆ ಬಂತು, ಹೇಳಿದೆ."

"ಆದರೆ ನೀನು ಯಾರು?" ಹುಡುಗಿ ಕೇಳಿದಳು.

"ನಾನು ಒಂದು ರೀತಿಯ ಬೇಟೆಗಾರನಮ್ಮ" ಕೊಕೊವಾನ್ಯ ಹೇಳಿದ. "ಬೇಸಿಗೆ ಕಾಲದಲ್ಲಿ ಹೊಳೆಯ ಮರಳು ತೊಳೆದು ಚಿನ್ನದ ಕಣಗಳಿಗಾಗಿ ಹುಡುಕುತ್ತೇನೆ. ಚಳಿಗಾಲದಲ್ಲಿ ಕಾಡಿಗೆ ಹೋಗಿ ಹೋತಕ್ಕಾಗಿ ಹುಡುಕಾಡುತ್ತೇನೆ. ಎಷ್ಟು ಹುಡು ಕಿದರೂ ಅದು ಮಾತ್ರ ಕಾಣುತ್ತಿಲ್ಲ."

"ಕಂಡರೆ ಕೊಲ್ತೀಯ?"

"ಇಲ್ಲ, ಇಲ್ಲ" ಕೊಕೊವಾನ್ಯ ಹೇಳಿದ. "ಸಾಮಾನ್ಯ ಹೋತಗಳನ್ನಾದರೆ ಕೊಲ್ತೀನಿ. ಆದರೆ ಇದನ್ನು ಕೊಲ್ಲಲ್ಲ. ಇದು ತನ್ನ ಬಲ ಮುಂಗಾಲಿನಿಂದ ನೆಲವನ್ನು ಎಲ್ಲಿ ಕುಟ್ಟುತ್ತೋ ಅಲ್ಲಿ ನೋಡಬೇಕೂಂತ ನನ್ನ ಇಷ್ಟ."




"ಯಾಕೆ?"

"ನನ್ನ ಜೊತೆ ಬಾ. ನನ್ನ ಗುಡಿಸಿಲಿನಲ್ಲೇ ವಾಸವಾಗಿರು. ನಿನಗೆ ಎಲ್ಲ ಹೇಳ್ತೀನಿ" ಉತ್ತರಿಸಿದ ಕೊಕೊವಾನ್ಯ.

ಪುಟ್ಟ ಹುಡುಗಿಗೆ ಆ ಹೋತದ ವಿಷಯ ಇನ್ನಷ್ಟು ತಿಳಿಯಬೇಕು ಅಂತ ತುಂಬ ಆಸೆಯಾಯಿತು. ಮುದುಕನೂ ಹರ್ಷಚಿತ್ತದವನಾಗಿ ಕರುಣೆಯಿಂದ ಕೂಡಿದವನಾಗಿ ಕಂಡುಬಂದ. ಆದ್ದರಿಂದ ಅವಳು ಹೇಳಿದಳು:

"ಆಗಲಿ. ಬರ್ತೀನಿ. ಆದರೆ ನನ್ನ ಬೆಕ್ಕು ಮುರ್ಯೋಂಕವನ್ನೂ ಕರೆದುಕೊಂಡು ಹೋಗಬೇಕು. ಆಗಬಹುದಾ? ನೋಡು ಎಷ್ಟು ಒಳ್ಳೆಯದು ಇದು."



"ಆಗಬಹುದು. ಖಂಡಿತ" ಉತ್ತರಿಸಿದ ಕೊಕೊವಾನ್ಯ. "ಇದು ಎಷ್ಟು ಚೆನ್ನಾಗಿ ಹಾಡುತ್ತೆ ! ಇದನ್ನು ಕರೆದುಕೊಂಡು ಹೋಗದೆ ಇರುವವನು ಮೂರ್ಖನಷ್ಟೆ. ಇದಿದ್ದರೆ ನಮಗೆ ನಮ್ಮ ಗುಡಿಸಿಲಿನಲ್ಲಿ ಬಲಲಾಯ್ಕ ವಾದ್ಯವೇ ಬೇಡ !"

ಮನೆಯೊಡತಿ ಇವರ ಮಾತುಗಳನ್ನೆಲ್ಲ ಕೇಳಿಸಿಕೊಂಡಳು. ಆ ಅನಾಥ ಹುಡುಗಿಯನ್ನು ಹೊರಗಟ್ಟಲು ಅವಳಿಗೆ ಆನಂದವೋ ಆನಂದ. ಅವಳು ಕೂಡಲೇ ದರ್‍ಯೋಂಕಳ ಬಟ್ಟೆಬರೆಗಳನ್ನೆಲ್ಲ ಅವಸರವಸರವಾಗಿ ಮೂಟೆ ಕಟ್ಟ ತೊಡಗಿದಳು. ಎಲ್ಲಿ ಮರು ಯೋಚನೆ ಮಾಡಿ ಮುದುಕ ಹುಡುಗಿ ಬೇಡ ಎಂದು ಬಿಡುವನೋ ಎಂಬ ಅಂಜಿಕೆ ಅವಳಿಗೆ.


ಬೆಕ್ಕೂ ಎಲ್ಲವನ್ನೂ ಅರ್ಥಮಾಡಿಕೊಂಡಂತೆ ಕಂಡುಬಂದಿತು. ಅದು ಅವರ ಕಾಲುಗಳಿಗೆ ತನ್ನ ಮೈ ಉಜ್ಜುತ್ತ, "ಸ್-ಸರಿ. ನೀನು ಹೇಳುವುದು ಸ್-ಸರಿ !" ಅನ್ನುವಂತೆ ಪರ್‌ಗುಟ್ಟಿತು.

ಸರಿ, ಕೊಕೊವಾನ್ಯ ಆ ಅನಾಥ ಹುಡುಗಿಯನ್ನು ತನ್ನ ಮನೆಗೆ ಕರೆದೊಯ್ದ. ಅವನೋ ಎತ್ತರವಾಗಿದ್ದ. ಅವನಿಗೆ ಉದ್ದವಾದ ಗಡ್ಡವಿತ್ತು. ಅವಳೋ ಪುಟ್ಟ ಹುಡುಗಿ. ಅವಳಿಗೆ ಸಣ್ಣ ಗುಲಾಬಿ ಮೊಗ್ಗಿನಂಥ ಮೂಗಿತ್ತು. ಅವರು ಬೀದಿಯಲ್ಲಿ ನಡೆದು ಹೋದರು. ಅವರ ಹಿಂದೆ ಆ ಕೊಳಕು ಬೆಕ್ಕೂ ಹೊರಟಿತು.

ಹೀಗೆ ಅವರು ಮೂವರೂ – ಅಜ್ಜ ಕೊಕೊವಾನ್ಯ, ಅನಾಥ ಬಾಲಕಿ ದರ್‍ಯೋಂಕ ಮತ್ತು ಬೆಕ್ಕು ಮುರ್‍ಯೋಂಕ, ಈ ಮೂವರೂ – ಒಟ್ಟಿಗೇ ವಾಸಮಾಡ ತೊಡಗಿದರು. ದಿನಗಳುರುಳಿದವು. ಅವರೇನೂ ಶ್ರೀಮಂತರಾಗಿರಲಿಲ್ಲ. ಆದರೆ ಅವರ ಬಳಿ ಅವರ ಜೀವನಕ್ಕೆ ಸಾಲುವಷ್ಟು ಇತ್ತು. ಪ್ರತಿಯೊಬ್ಬರಿಗೂ ಕೆಲಸ ಬೇಕಾದಷ್ಟಿತ್ತು.

ಬೆಳಿಗ್ಗೆ ಕೊಕೊವಾನ್ಯ ಕೆಲಸಕ್ಕೆ ಹೋಗುತ್ತಿದ್ದ. ದರ್‍ಯೋಂಕ ಗುಡಿಸಿಲನ್ನು ಗುಡಿಸಿ ಸಾರಿಸಿ ಎಲ್ಲವನ್ನೂ ಚೊಕ್ಕಟಗೊಳಿಸುತ್ತಿದ್ದಳು. ಆಮೇಲೆ ಸಾರು ಹಾಗೂ ಅಂಬಲಿ ಬೇಯಿಸುತ್ತಿದ್ದಳು. ಬೆಕ್ಕು ಬೇಟೆಗೆ ಹೋಗುತ್ತಿತ್ತು – ಇಲಿಗಳನ್ನು ಹಿಡಿಯುತ್ತಿತ್ತು. ಸಂಜೆ ಎಲ್ಲರೂ ಮನೆಯಲ್ಲಿ ಕೂಡುತ್ತಿದ್ದರು, ಸಂತಸದಿಂದ ಕಾಲ ಕಳೆಯುತ್ತಿದ್ದರು.





ಮುದುಕ ಒಳ್ಳೆಯ ಕಥೆಗಾರನಾಗಿದ್ದ. ಅವನ ಅದ್ಭುತ ಕಥೆಗಳನ್ನು ಕೇಳುವುದೆಂದರೆ ದರ್ಯೋಂಕಳಿಗೆ ಪ್ರಾಣ. ಬೆಕ್ಕೂ ಪಕ್ಕದಲ್ಲೇ ಮಲಗಿ "ಸ್-ಸರಿ! ನೀನು ಹೇಳುವುದು ಸ್-ಸರಿ!" ಎಂದು ಪರ್‌ಗುಟ್ಟುತ್ತಿತ್ತು.

ಆದರೆ ಪ್ರತಿಯೊಂದು ಕಥೆ ಕೇಳಿದನಂತರವೂ ದರ್ಯೋಂಕ ಮುದುಕನಿಗೆ ಮತ್ತೆ ಮತ್ತೆ ನೆನಪು ಮಾಡುತ್ತಿದ್ದಳು: "ಈಗ ಹೇಳು, ಅಜ್ಜ, ಆ ಹೋತದ ವಿಷಯ. ಅದು ಹೇಗಿರುತ್ತೆ?"

ಮೊದಮೊದಲು ಕೊಕೊವಾನ್ಯ ವಿಷಯ ತಪ್ಪಿಸಲು ಯತ್ನಿಸಿದ. ಆದರೆ ಅನಂತರ ಅವನು ಅವಳಿಗೆ ಹೇಳಿದ:

"ಅದೊಂದು ತುಂಬ ವಿಶೇಷ ರೀತಿಯ ಹೋತ. ಬಲಗಾಲಿನಲ್ಲಿ ಅದಕ್ಕೊಂದು ಬೆಳ್ಳಿಯ ಪುಟ್ಟ ಗೊರಸಿದೆ. ಆ ಬೆಳ್ಳಿಯ ಗೊರಸಿನಿಂದ ಅದು ನೆಲವನ್ನು ಎಲ್ಲಿ

ಬಡಿದರೆ ಅಲ್ಲೊಂದು ರತ್ನದ ಹಳಕು ಬೀಳುತ್ತೆ. ಒಮ್ಮೆ ಬಡಿದರೆ ಒಂದು ಹಳಕು. ಎರಡು ಬಾರಿ ಬಡಿದರೆ ಎರಡು ಹಳಕುಗಳು. ಎಲ್ಲಿ ಪುಟ್ಟ ಕಾಲಿನಿಂದ ನೆಲವನ್ನು ಕುಟ್ಟ ತೊಡಗಿದರೆ ಅಲ್ಲಿ ರತ್ನದ ಹಳಕುಗಳ ರಾಶಿಯೇ ಉಂಟಾಗುತ್ತೆ."

ಹೇಳಿ ಬಿಟ್ಟ. ಆದರೆ ಅನಂತರ ಯಾಕೆ ಹೇಳಿದೆನೋ ಎಂದು ವಿಷಾದಿಸುವಂತಾಯಿತು. ಏಕೆಂದರೆ ಅದಾದ ಮೇಲೆ ದರ್‍ಯೋಂಕ ಆ ಹೋತದ ವಿಷಯ ಬಿಟ್ಟು ಬೇರಾವ ಮಾತನ್ನೂ ಆಡುತ್ತಿರಲಿಲ್ಲ.

"ಅಜ್ಜ, ಆ ಹೋತ ತುಂಬ ದೊಡ್ಡದೇ?"

ಅದು ಮನೆಯಲ್ಲಿದ್ದ ಮೇಜಿಗಿಂತ ಹೆಚ್ಚಿಗೇನೂ ಎತ್ತರವಿರಲಿಲ್ಲ, ತೆಳುವಾದ ಪುಟ್ಟ ಕಾಲುಗಳು, ಹಗುರವಾದ ಪುಟ್ಟ ತಲೆ, ಎಂದೆಲ್ಲ ಕೊಕೊವಾನ್ಯ ವಿವರಿಸಿದ. ಆದರೂ ದರ್‍ಯೋಂಕ ಕೇಳುತ್ತಲೇ ಇದ್ದಳು: "ಅದಕ್ಕೆ ಕೊಂಬುಗಳಿವೆಯೇ, ಅಜ್ಜ?"

"ಹುಂ. ಇವೆ. ಅವೂ ಎಂಥ ಸೊಗಸಾದ ಕೊಂಬುಗಳು ಅಂತೀಯ. ಸಾಮಾನ್ಯ ಹೋತಗಳಿಗೆ ಎರಡು ಕೊಂಬುಗಳಿದ್ದರೆ ಇದಕ್ಕೆ ಕವಲುಗೊಂಬುಗಳಿವೆ, ಐದು ಕವಲುಗಳ ಕೊಂಬುಗಳು!"

"ಅದು ಯಾರನ್ನು ತಿನ್ನುತ್ತೆ, ಅಜ್ಜ?"

"ಇಲ್ಲಮ್ಮ" ಅವನು ಉತ್ತರಿಸುತ್ತಾನೆ. "ಯಾರನ್ನೂ ತಿನ್ನೊಲ್ಲ. ಹುಲ್ಲನ್ನು, ಎಲೆಗಳನ್ನು ತಿನ್ನುತ್ತೆ. ಚಳಿಗಾಲದಲ್ಲಿ ಮೆದೆಗಳಿಂದ ಸ್ವಲ್ಪ ಒಣಹುಲ್ಲನ್ನೂ ಕಿತ್ತು ತಿನ್ನಬಹುದು."



"ಅಜ್ಜ, ಅದರ ಬಣ್ಣ ಎಂಥದೋ?"

"ಬೇಸಿಗೆಯಲ್ಲಿ ಅದು ಈ ಬೆಕ್ಕಿನಂತೆ ಕಂದು ಬಣ್ಣಕ್ಕಿರುತ್ತೆ. ಚಳಿಗಾಲದಲ್ಲಿ ಬೆಳ್ಳಿ-ಬೂದು ಬಣ್ಣ."


ಶರತ್ಕಾಲ ಬಂದಿತು. ಕೊಕೊವಾನ್ಯ ಕಾಡಿಗೆ ಹೋಗಲು ಸಿದ್ಧತೆ ನಡೆಸ ತೊಡಗಿದ. ಹೋತಗಳು ಮೇಯುತ್ತಿದ್ದ ಸ್ಥಳಕ್ಕೆ ಹೋಗಿ ನೋಡಬೇಕೂಂತ ಅವನ ಆಸೆ. ಆದರೆ ದರ್ಯೋಂಕಳೂ ಕಾಡ ತೊಡಗಿದಳು, ಬೇಡ ತೊಡಗಿದಳು:

"ನನ್ನನ್ನೂ ನಿನ್ನೊಂದಿಗೆ ಕರೆದುಕೊಂಡು ಹೋಗು, ಅಜ್ಜ! ನನಗೂ ಆ ಪುಟ್ಟ ಹೋತವನ್ನು ನೋಡಬೇಕೂಂತ ಆಸೆ, ಅದು ತುಂಬ ದೂರದಲ್ಲಿದ್ದರೂ ಸರಿ!"

ಕೊಕೊವಾನ್ಯ ಅವಳಿಗೆ ವಿವರಿಸುತ್ತಾನೆ:

"ತುಂಬ ದೂರದಲ್ಲಿರುತ್ತಮ್ಮ. ನಿನಗೆ ಗೊತ್ತಾಗೋದೇ ಇಲ್ಲ. ಶರತ್ಕಾಲದಲ್ಲಿ





ಎಲ್ಲ ಹೋತಗಳಿಗೂ ಕೊಂಬುಗಳಿರುತ್ತವೆ. ಅವಕ್ಕೆ ಎಷ್ಟು ಕವಲು ಕೊಂಬುಗಳಿವೆ ಅನ್ನುವುದು ನಿನಗೆ ಕಾಣಿಸೊಲ್ಲ. ಚಳಿಗಾಲದಲ್ಲಾದರೆ ಅದು ಬೇರೆ ವಿಷಯ. ಆಗ ಸಾಮಾನ್ಯ ಹೋತಗಳಿಗೆ ಕೊಂಬುಗಳಿರುವುದಿಲ್ಲ. ಈ ಬೆಳ್ಳಿಯ ಗೊರಸಿನ ಹೋತಕ್ಕಷ್ಟೆ ಬೇಸಿಗೆಯಾಗಲೀ ಚಳಿಗಾಲವಾಗಲೀ ಸದಾ ಕಾಲವೂ ಕೊಂಬುಗಳಿರುತ್ತವೆ. ಆಗ ದೂರದಿಂದಲೇ ನೀನು ಅದನ್ನು ಗುರುತಿಸಿ ತಿಳಿಯಬಹುದು."

ಹೀಗೆ ಹೇಳಿ ಅವನು ಅವಳನ್ನು ಸಮಾಧಾನಗೊಳಿಸುವುದರಲ್ಲಿ ಯಶಸ್ವಿಯಾದ. ದರ್‍ಯೋಂಕ ಮನೆಯಲ್ಲೇ ಉಳಿದಳು. ಕೊಕೊವಾನ್ಯ ಕಾಡಿಗೆ ಹೋದ. ಐದು ದಿನ ಗಳಾದ ಮೇಲೆ ಅವನು ಮನೆಗೆ ಹಿಂದಿರುಗಿದ. ದರ್‍ಯೋಂಕಳಿಗೆ ಹೇಳುತ್ತಾನೆ:

"ಈ ವರ್ಷ ತುಂಬ ಹೋತಗಳು ಪೊಲ್‌ದ್ನೇವ್ಸ್ಕ ಪಕ್ಕದಲ್ಲಿ ಮೇಯುತ್ತಿವೆ. ಚಳಿಗಾಲದಲ್ಲೂ ನಾನು ಅಲ್ಲಿಗೇ ಹೋಗುತ್ತೇನೆ."

"ಚಳಿಗಾಲದಲ್ಲಿ ಕಾಡಿನಲ್ಲಿ ಹೇಗೆ ಮಲಗಿಕೊಳ್ಳುತ್ತೀಯ?" ದರ್‍ಯೋಂಕ ಕೇಳಿ ದಳು.

"ನನಗೆ ಅಲ್ಲೊಂದು ಚಳಿಗಾಲದ ಸಣ್ಣ ಗುಡಿಸಿಲಿದೆ. ಕಾಡಿನ ಮಧ್ಯದ ಬಯಲಿ ನಲ್ಲಿ ನಾವು ಹುಲ್ಲು ಕೊಯ್ಯಲು ಹೋಗುವ ಸ್ಥಳದಲ್ಲಿ ಅದು ಇದೆ" ಅವನೆಂದ. "ಅದು ಭದ್ರವಾಗಿದೆ. ಅದಕ್ಕೆ ಒಂದು ಕಿಟಕಿ ಇದೆ. ಒಳಗೆ ಒಲೆಯೂ ಇದೆ. ಅಲ್ಲಿ ಚೆನ್ನಾಗಿರುತ್ತೆ."

ದರ್‍ಯೋಂಕ ಮತ್ತೆ ಕೇಳುತ್ತಾಳೆ:

"ಬೆಳ್ಳಿಯ ಪುಟ್ಟ ಗೊರಸಿನ ಹೋತವೂ ಅಲ್ಲಿಗೆ ಮೇಯಲು ಬರುತ್ತೆಯೇ?"

"ಯಾರಿಗೆ ಗೊತ್ತು? ಬಂದರೂ ಬರಬಹುದು."

ಆಗ ಹುಡುಗಿ ಮತ್ತೆ ಬೇಡ ತೊಡಗಿದಳು:

"ಅಜ್ಜ, ನನ್ನನ್ನೂ ನಿನ್ನ ಜೊತೆ ಕರೆದುಕೊಂಡು ಹೋಗು! ನಾನೂ ಆ ಗುಡಿ ಸಿಲಿನಲ್ಲಿ ಇರುತ್ತೇನೆ. ಬೆಳ್ಳಿಯ ಪುಟ್ಟ ಗೊರಸಿನ ಹೋತ ಗುಡಿಸಿಲಿನ ಹತ್ತಿರ ಬಂದರೂ ಬರಬಹುದು. ಆಗ ನಾನದನ್ನು ನೋಡಲು ಸಾಧ್ಯವಾಗುತ್ತೆ."

ಮೊದಲು ಮುದುಕ ಇದಕ್ಕೆ ಒಪ್ಪಲಿಲ್ಲ. "ಏನು! ನೀನಿನ್ನೂ ಪುಟ್ಟ ಹುಡುಗಿ.

ನಿನ್ನನ್ನು ಚಳಿಗಾಲದಲ್ಲಿ ಕಾಡಿಗೆ ಕರೆದೊಯ್ಯುವುದೆ? ಅಲ್ಲಿ ಜಾರುಪಟ್ಟಿಯ ಮೇಲೆ ಜಾರಿಕೊಂಡು ಹೋಗಬೇಕಾಗುತ್ತೆ. ಅದು ನಿನಗೆ ಗೊತ್ತಿಲ್ಲ. ನೀನು ಮಂಜಿನ ರಾಶಿಯಲ್ಲಿ ಮುಳುಗಿಹೋಗುತ್ತೀಯಷ್ಟೆ. ನಿನ್ನನ್ನು ಕರೆದುಕೊಂಡು ಹೋಗಿ ನಾನೇನು ಮಾಡಲಿ! ನೀನೂ ಹೆಪ್ಪುಗಟ್ಟುವೆ ಅಷ್ಟೆ!"

ಆದರೆ ದರ್‍ಯೋಂಕ ಅವನನ್ನು ಒಬ್ಬನೇ ಹೋಗಲು ಬಿಡಲಿಲ್ಲ. ಅವಳು ಬೇಡುತ್ತಲೇ ಹೋದಳು: "ನನ್ನನ್ನೂ ಕರೆದುಕೊಂಡು ಹೋಗು, ಅಜ್ಜ! ನನಗೂ ಜಾರುಪಟ್ಟಿಯ ಮೇಲೆ ಹೋಗುವುದು ಸ್ವಲ್ಪ ಬರುತ್ತೆ!"

ಕೊಕೊವಾನ್ಯ ಅದೂ ಇದೂ ತುಂಬ ಹೇಳಿದ. ಆದರೆ ಕೊನೆಗೆ ತನ್ನಲ್ಲೇ ಹೇಳಿಕೊಂಡ: "ಹೋಗಲಿ. ಇವಳನ್ನೂ ಕರೆದುಕೊಂಡು ಹೋದರೆ ಏನಂತೆ? ಒಂದು ಸಾರಿ ಬಂದು ಅನುಭವಿಸಿ ನೋಡಲಿ. ಆಮೇಲೆ ತಾನೇ ಬೇಡ ಅಂತಾಳೆ!"



“ಹಾಗೇ ಆಗಲಿ” ಅವನೆಂದ. “ನಿನ್ನನ್ನೂ ಕರೆದುಕೊಂಡು ಹೋಗುತ್ತೇನೆ. ಆದರೆ ಕಾಡಿಗೆ ಹೋದ ಮೇಲೆ ಅಳುವುದಕ್ಕೆ ಶುರು ಮಾಡಬಾರದು, ಮನೆಗೆ ಹಿಂದಿರುಗೋಣ ಅಂತ ಕೇಳಬಾರದು, ಅಷ್ಟೆ.”

ಚಳಿಗಾಲ ಪೂರ್ಣ ಕಸುವಿನೊಂದಿಗೆ ಬಂದಿತು. ಕೊಕೊವಾನ್ಯ ಒಂದು ಕೈ-ಜಾರುಬಂಡಿಯಲ್ಲಿ ಎರಡು ಚೀಲಗಳ ತುಂಬ ರಸ್ಕ್, ಬೇಟೆಗೆ ಬೇಕಾದ ಕೆಲವು ವಸ್ತುಗಳು ಮತ್ತಿತರ ಅವಶ್ಯ ಸಾಮಾನುಗಳನ್ನು ತುಂಬಿದ. ದರ್ಯೋಂಕಳೂ ತನಗೆ ಬೇಕಾದ ವಸ್ತುಗಳನ್ನೆಲ್ಲ ಜೋಡಿಸಿ ಒಂದು ಪುಟ್ಟ ಮೂಟೆ ಕಟ್ಟಿದಳು. ತನ್ನ ಬೊಂಬೆಗೆ ಒಂದು ಫ್ರಾಕ್ ಹೊಲಿಯಲು ಒಂದಿಷ್ಟು ಚಿಂದಿ ಬಟ್ಟೆ, ಒಂದು ಲಡಿ ದಾರ, ಒಂದು ಸೂಜಿ ತೆಗೆದುಕೊಂಡಳು. ಒಂದು ಹಗ್ಗವನ್ನೂ ಇಟ್ಟುಕೊಂಡಳು.

ಈ ಹಗ್ಗದಿಂದ ನಾನು ಬೆಳ್ಳಿಯ ಪುಟ್ಟ ಗೊರಸನ್ನು ಕಟ್ಟಿ ಹಾಕಲು ಸಾಧ್ಯವಾಗಬಹುದು, ಎಂದವಳು ಅಂದುಕೊಂಡಳು.

ಬೆಕ್ಕನ್ನು ಬಿಟ್ಟು ಹೋಗಲು ಅವಳಿಗೆ ದುಃಖವಾಯಿತು. ಆದರೆ ಬೇರೆ ಮಾರ್ಗವೇ ಇರಲಿಲ್ಲ. ಅವಳು ಅದರ ಬೆನ್ನು ತಡವಿದಳು. ಅದರೊಂದಿಗೆ ಮುದ್ದು ಮಾತನಾಡಿದಳು, ಎಲ್ಲವನ್ನೂ ವಿವರಿಸಿ ತಿಳಿಸಿದಳು:

“ಅಜ್ಜನೂ ನಾನೂ ಕಾಡಿಗೆ ಹೋಗುತ್ತಿದ್ದೇವೆ, ಮುರ್ಯೋಂಕ. ನೀನು ಇಲ್ಲೇ ಇರು. ಎಲ್ಲ ಇಲಿಗಳನ್ನೂ ಹಿಡಿದು ಹಾಕು. ಬೆಳ್ಳಿಯ ಪುಟ್ಟ ಗೊರಸನ್ನು ಕಂಡ ಕೂಡಲೇ ನಾವು ಹಿಂದಿರುಗುತ್ತೇವೆ. ಆಮೇಲೆ ನಾನು ನಿನಗೆ ಎಲ್ಲವನ್ನೂ ವಿವರಿಸಿ ತಿಳಿಸುತ್ತೇನೆ.”

ಬೆಕ್ಕು ತನ್ನ ಠಕ್ಕಿನ ಕಣ್ಣುಗಳಿಂದ ಮೇಲೆ ನೋಡುತ್ತ ಪರ್‌ಗುಟ್ಟಿತು: “ಸ್-ಸರಿ ! ನೀನು ಹೇಳಿದ್ದು ಸ್-ಸರಿ !”

ಹೀಗೆ ಕೊಕೊವಾನ್ಯ ಮತ್ತು ದರ್ಯೋಂಕ ಹೊರಟರು. ಅಕ್ಕಪಕ್ಕದವರೆಲ್ಲ ಬೆರಗಾಗಿ ನೋಡಿದರು: “ಏನು ಈ ಮುದುಕನಿಗೆ ಹುಚ್ಚೇ ? ಚಳಿಗಾಲದಲ್ಲಿ ಪುಟ್ಟ ಹುಡುಗಿಯನ್ನು ಕಾಡಿಗೆ ಕರೆದುಕೊಂಡು ಹೊರಟಿದ್ದಾನಲ್ಲ !”

ಕೊಕೊವಾನ್ಯ ಮತ್ತು ದರ್ಯೋಂಕ ಹಳ್ಳಿಯ ಕೊನೆಯ ಮನೆಗಳನ್ನೂ ಹಿಂದೆ ಬಿಟ್ಟು ಮುಂದೆ ನಡೆದರು. ಆಗ ಅವರಿಗೆ ಹಳ್ಳಿಯ ನಾಯಿಗಳೆಲ್ಲ ಯಾವುದೋ





ಕಾಡು ಪ್ರಾಣಿ ಹಳ್ಳಿಯೊಳಕ್ಕೆ ಬಂದು ಬಿಟ್ಟಿದ್ದಿತೇನೋ ಅನ್ನುವಂತೆ ಭಾರಿ ಕೋಲಾಹಲ ಎಬ್ಬಿಸಿ ಬೊಗಳಲು ಅರಚಲು ತೊಡಗಿದುದು ಕೇಳಿಬಂದಿತು. ಅವರು ಹಿಂದಿರುಗಿ ನೋಡಿದರು – ಅವರ ಬೆಕ್ಕು ಮುರ್ಯೋಂಕ ಬೊಗಳುತ್ತಿದ್ದ ನಾಯಿಗಳತ್ತ ಉಗುಳುತ್ತ ಫೂತ್ಕರಿಸುತ್ತ ರಸ್ತೆಯ ಮಧ್ಯದಲ್ಲಿ ಓಡಿ ಬರುತ್ತಿತ್ತು. ಬೆಕ್ಕು ಈಗ ಸೊಗಸಾಗಿ ದೊಡ್ಡದಾಗಿ ಬೆಳೆದಿತ್ತು. ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬಲ್ಲುದಿತ್ತು. ಯಾವ ನಾಯಿಯೂ ಅದರೊಂದಿಗೆ ಜಗಳವಾಡುವ ಸಾಹಸ ಮಾಡದಾಗಿತ್ತು.

ದರ್ಯೋಂಕ ಅದನ್ನು ಹಿಡಿದು ಹಿಂದಿರುಗಿ ಮನೆಯಲ್ಲಿರಿಸ ಬಯಸಿದ್ದಳು. ಆದರೆ ಅದೆಲ್ಲಿ ಸಾಧ್ಯ ! ಅದು ಆಗಲೇ ಕಾಡಿನ ಒಳ ಹೊಕ್ಕು ಒಂದು ದೊಡ್ಡ ಮರದ ಮೇಲೆ ಹತ್ತಿ ಕುಳಿತಿತ್ತು ! ಅಲ್ಲಿಂದ ಇಳಿದು ಬರುವಂತೆ ಮಾಡಲು ಸಾಧ್ಯವೇ ? ದರ್ಯೋಂಕ ಬೇಕಾದಷ್ಟು ಸಾರಿ ಅದನ್ನು ಕೂಗಿ ಕರೆದಳು. ಆದರೆ ಅದು ಅವಳ ಮಾತಿಗೆ ಮರುಳಾಗಲಿಲ್ಲ. ಏನು ಮಾಡೋಕಾಗುತ್ತೆ ? ಅವರು ಹಾಗೆಯೇ ಮುಂದು



ವರಿದರು. ಸ್ವಲ್ಪ ದೂರ ಹೋಗಿ ಹಿಂದಿರುಗಿ ನೋಡಿದಾಗ ಮುರ್ರ್ಯೋಂಕ ಅವರ ಹಿಂದೆಯೇ ಪಕ್ಕದಲ್ಲಿ ಓಡಿ ಬರುತ್ತಿತ್ತು. ಹೀಗೆ ಅವರು ಕೊನೆಗೂ ಕಾಡಿನಲ್ಲಿದ್ದ ಗುಡಿಸಿಲು ಬಂದು ಸೇರಿದರು.

ಅವರು ಮೂವರೂ ಅಲ್ಲಿ ವಾಸಮಾಡ ತೊಡಗಿದರು. ದರ್ರ್ಯೋಂಕ ಜಂಭ ದಿಂದ ಹೇಳಿದಳು:

"ಈಗ ಎಲ್ಲ ಎಷ್ಟು ಉಲ್ಲಾಸವಾಗಿದೆ, ಅಲ್ಲವಾ?"

ಕೊಕೊವಾನ್ಯನೂ ಒಪ್ಪಿದ:

"ಹೌದು, ಹೌದು. ಹೆಚ್ಚು ಉಲ್ಲಾಸವಾಗಿದೆ."

ಬೆಕ್ಕು ಚೆಂಡಿನಂತೆ ಮೈ ಮುದುಡಿಕೊಂಡು ಒಲೆಯ ಬಳಿ ಕುಳಿತು ಗಟ್ಟಿಯಾಗಿ ಪರ್‌ಗುಟ್ಟಿತು: "ಸ್-ಸರಿ! ನೀನು ಹೇಳಿದ್ದು ಸ್-ಸರಿ!"

ಆ ಚಳಿಗಾಲದಲ್ಲಿ ಅಲ್ಲಿ ಬೇಕಾದಷ್ಟು ಹೋತಗಳು ಮೇಯುತ್ತಿದ್ದವು. ಸಾಮಾನ್ಯ ಹೋತಗಳು. ಕೊಕೊವಾನ್ಯ ಪ್ರತಿದಿನವೂ ಬೇಟೆ ಮಾಡಿ ಒಂದೆರಡು ಹೋತಗಳನ್ನು

ಹಿಡಿದು ತರುತ್ತಿದ್ದ. ಅವುಗಳನ್ನು ಕೊಂದು ಚರ್ಮ ಸುಲಿಯಲಾಗುತ್ತಿತ್ತು. ಚರ್ಮಗಳ ರಾಶಿ ದೊಡ್ಡದಾಗಿ ಬೆಳೆಯಿತು. ಮಾಂಸಕ್ಕೆ ಉಪ್ಪೂರಿಸಿ ಇರಿಸಿದರು. ಈಗ ಅವುಗಳೆಲ್ಲ ಕೈ-ಜಾರುಬಂಡಿಯಲ್ಲಿ ಎಳೆದು ಒಯ್ಯಲು ಸಾಧ್ಯವಾಗದಷ್ಟು ಭಾರಿಯಾಗಿ ಬೆಳೆದವು. ಹಳ್ಳಿಗೆ ಹೋಗಿ ಕುದುರೆ ತರಬೇಕು ಅನ್ನಿಸಿತು ಕೊಕೊವಾನ್ಯನಿಗೆ. ಆದರೆ ದರ್ರ್ಯೋಂಕ ಒಬ್ಬಳನ್ನೇ ಆ ಬೆಕ್ಕಿನೊಂದಿಗೆ ಕಾಡಿನಲ್ಲಿ ಬಿಟ್ಟು ಹೋಗುವುದು ಹೇಗೆ? ಆದರೆ ದರ್ರ್ಯೋಂಕಳಿಗೆ ಈ ಕಾಡು ಜೀವನ ಒಗ್ಗಿಹೋಗಿತ್ತು. ಅವಳೇ ಮುದುಕನಿಗೆ ಸಲಹೆ ನೀಡಿದಳು:

"ಅಜ್ಜ, ನೀನು ಹಳ್ಳಿಗೆ ಹೋಗಿ ಒಂದು ಕುದುರೆಯನ್ನೇಕೆ ತರಬಾರದು? ಆಗಷ್ಟೆ ಈ ಚರ್ಮ ಈ ಉಪ್ಪೂರಿಸಿದ ಮಾಂಸ ಎಲ್ಲವನ್ನೂ ಹಳ್ಳಿಗೆ ಒಯ್ಯಲು ಸಾಧ್ಯವಾಗುತ್ತೆ."

ಅವಳ ಮಾತು ಕೇಳಿ ಕೊಕೊವಾನ್ಯ ಬೆರಗಾದ:

"ಹುಡುಗಿ ಚಿಕ್ಕವಳಾದರೂ ಎಂಥ ಬುದ್ಧಿವಂತೆ! ವಯಸ್ಸಾದ ಹೆಂಗಸಿನಂಥ ವಿವೇಕ! ಅದು ಸರಿ. ಆದರೆ ಒಬ್ಬಳೇ ಇರುವುದಕ್ಕೆ ನಿನಗೆ ಹೆದರಿಕೆ ಆಗುವುದಿಲ್ಲವೇ?"

"ಯಾಕೆ ಹೆದರಬೇಕು?" ಅವಳೆಂದಳು. "ಗುಡಿಸಿಲು ಭದ್ರವಾಗಿದೆ ಅಂತ ನೀನೇ ಹೇಳಿದೆಯಲ್ಲ. ತೋಳಗಳು ಒಳಕ್ಕೆ ಬರಲಾರವು. ಅಲ್ಲದೆ ತೋಳಗಳು ಈ ಕಡೆ ಏನೂ ಬರುವುದಿಲ್ಲ. ನನ್ನ ಜೊತೆಗೆ ಬೆಕ್ಕು ಮುರ್ರ್ಯೋಂಕ ಇರುತ್ತಲ್ಲ. ನನಗೇನೂ ಹೆದರಿಕೆ ಆಗುವುದಿಲ್ಲ. ಆದರೂ ಬೇಗ ಬಂದು ಬಿಡು!"

ಕೊಕೊವಾನ್ಯ ಹೊರಟ. ದರ್ರ್ಯೋಂಕ ಬೆಕ್ಕಿನೊಂದಿಗೆ ಹಿಂದೆ ಉಳಿದಳು. ಹಗಲು ಹೊತ್ತಿನಲ್ಲಿ ಕೊಕೊವಾನ್ಯ ಹೋತಗಳನ್ನು ಬೇಟೆಯಾಡಲು ಹೋಗುತ್ತಿದ್ದುದರಿಂದ ಒಂಟಿಯಾಗಿರುವುದು ಅವಳಿಗೆ ಅಭ್ಯಾಸವಾಗಿತ್ತು. ಆದರೆ ಕತ್ತಲಾಗ ತೊಡಗಿದಾಗ ಅವಳಿಗೆ ಹೆದರಿಕೆ ಆಗ ತೊಡಗಿತು. ಬೆಕ್ಕಿನ ಕಡೆ ನೋಡುತ್ತಾಳೆ – ಅದು ಸುಖವಾಗಿ ಸಂತೃಪ್ತ ಭಾವನೆಯೊಂದಿಗೆ ನಿಶ್ಶಬ್ದವಾಗಿ ಮಲಗುತ್ತಿದೆ. ಅದರಿಂದ ದರ್ರ್ಯೋಂಕಳಿಗೆ ಸ್ವಲ್ಪ ಧೈರ್ಯ ಬಂದಿತು. ಅವಳು ಕಿಟಕಿಯ ಬಳಿ ಕುಳಿತು ಬಯಲಿನ ಕಡೆಗೆ ನೋಡಿದಳು. ಅಲ್ಲಿ ಪುಟ್ಟ ಚೆಂಡಿನಂತೆ ಕಾಣುತ್ತಿದ್ದ ಏನೋ ಒಂದು ಮರಗಳ



ಮಧ್ಯದಿಂದ ಆ ಬಯಲಿಗೆ ಕುಪ್ಪಳಿಸಿಕೊಂಡು ಬಂದಿತು. ಅದು ಹೆಚ್ಚು ಹತ್ತಿರ ಬಂದಿತು. ಅದೊಂದು ಹೋತವಾಗಿದ್ದಿತೆಂದು ಅವಳು ಕಂಡುಕೊಂಡಳು. ಅದಕ್ಕೆ ತೆಳುವಾದ ಪುಟ್ಟ ಕಾಲುಗಳಿದ್ದವು. ಹಗುರವಾದ ಪುಟ್ಟ ತಲೆ, ತಲೆಯ ಮೇಲೆ ಐದು ಕವಲುಗಳ ಕೊಂಬುಗಳು. ದರ್ಯೋಂಕ ತಕ್ಷಣವೇ ಹೊರಕ್ಕೆ ಓಡಿದಳು. ಆದರೆ ಅಲ್ಲಿ ಅವಳಿಗೆ ಏನೂ ಕಾಣಲಿಲ್ಲ. ತುಂಬ ಹೊತ್ತು ಕಾದಳು. ಆಮೇಲೆ ಗುಡಿಸಿಲಿನ ಒಳಕ್ಕೆ ಹಿಂದಿರುಗಿದಳು. "ನಾನೆಲ್ಲೋ ಕನಸು ಕಂಡಿರಬೇಕು" ಅವಳು ಅಂದುಕೊಂಡಳು. "ಇದು ಕೇವಲ ನನ್ನ ಭ್ರಾಂತಿಯಾಗಿರಬೇಕು."


ಮುರ್ಯೋಂಕ ಪರ್‌ಗುಟ್ಟಿತು: "ಸ್-ಸರಿ ! ನೀನು ಹೇಳಿದ್ದು ಸ್-ಸರಿ !"

ದರ್ಯೋಂಕ ಬೆಕ್ಕನ್ನು ಎತ್ತಿಕೊಂಡು ತನ್ನ ಹಾಸಿಗೆಗೆ ಹೋಗಿ ಮಲಗಿದಳು. ಬೆಳಗಿನವರೆಗೂ ಗಾಢವಾಗಿ ನಿದ್ರೆ ಮಾಡಿದಳು. ಇನ್ನೊಂದು ದಿನ ಕಳೆಯಿತು. ಕೊಕೊವಾನ್ಯ ಬರಲೇ ಇಲ್ಲ. ದರ್ಯೋಂಕಳಿಗೆ ಬೇಸರವಾಯಿತು, ಒಂಟಿತನದ ಭಾವನೆ ಬಂದಿತು. ಆದರೆ ಅವಳು ಅಳಲಿಲ್ಲ. ಬದಲು ಬೆಕ್ಕಿನ ಬೆನ್ನು ಸವರಿದಳು.

"ತಳಮಳಗೊಳ್ಳಬೇಡ, ಮುದ್ದು ಮುರ್ಯೋಂಕ" ಅವಳೆಂದಳು. "ಅಜ್ಜ ನಾಳೆ ಬರುತ್ತಾನೆ, ನೋಡುವಿಯಂತೆ."

ಉತ್ತರವಾಗಿ ಮುರ್ಯೋಂಕ ತನ್ನ ಎಂದಿನ ಹಾಡನ್ನೇ ಹಾಡಿತು: "ಸ್-ಸರಿ ! ನೀನು ಹೇಳಿದ್ದು ಸ್-ಸರಿ !"

ದರ್ಯೋಂಕ ಮತ್ತೆ ಕಿಟಕಿಯ ಬಳಿ ಕುಳಿತು ನಕ್ಷತ್ರಗಳತ್ತ ನೋಡ ತೊಡಗಿದಳು. ಮಲಗಲು ಹೋಗೋಣವೆಂದುಕೊಳ್ಳುತ್ತಿದ್ದಾಗ ಅವಳಿಗೆ ಇದ್ದಕ್ಕಿದ್ದಂತೆ ಗುಡಿಸಿಲಿನ ಗೋಡೆಯ ಹಿಂದೆ ಟಪ-ಟಪ ಸದ್ದು ಕೇಳಿಬಂದಿತು. ಅವಳು ಗಾಬರಿಗೊಂಡು ನೆಗೆದು ನಿಂತಳು. ಸ್ವಲ್ಪ ಹೊತ್ತಿನ ಮೇಲೆ ಇನ್ನೊಂದು ಗೋಡೆಯ ಬಳಿ ಟಪ-ಟಪ ಸದ್ದು ಕೇಳಿಸಿತು. ಆಮೇಲೆ ಮತ್ತೆ ಹಿಂದಿನ ಗೋಡೆಯ ಬಳಿಯೇ, ಆಮೇಲೆ ಬಾಗಿಲ ಬಳಿ, ಕೊನೆಗೆ ಮಾಡಿನ ಮೇಲೆ ಅದೇ ತರಹ ಸದ್ದು ಕೇಳಿಬಂದಿತು. ಅದೇನೂ ಗಟ್ಟಿಯಾಗಿರಲಿಲ್ಲ. ಆದರೆ ತುಂಬ ಬೇಗ ಬೇಗ ಹಗುರವಾಗಿ ಹಾಕಿದ ಹೆಜ್ಜೆ ಸದ್ದುಗಳಂತೆ ಕೇಳಿಬಂದಿತು.



ಇದ್ದಕ್ಕಿದ್ದಂತೆ ದರ್‍ಯೋಂಕಳಿಗೆ ಯೋಚನೆ ಹೊಳೆಯಿತು: ನಿನ್ನೆ ಬಂದಿದ್ದ ಹೋತವೇ ಇಂದೂ ಬಂದಿರಬಹುದೇನೋ? ಅವಳಿಗೆ ಅದನ್ನು ಕಾಣಬೇಕೆಂಬ ಇಚ್ಛೆ ಎಷ್ಟು ಉತ್ಕಟವಾಯಿತೆಂದರೆ ಭಯವೂ ಅವಳನ್ನು ತಡೆ ಹಿಡಿಯದಾಯಿತು. ಬಾಗಿಲನ್ನು ತೆರೆದು ಹೊರಗೆ ತಲೆ ಹಾಕಿ ನೋಡಿದಳು. ಆ ಹೋತ ಅಲ್ಲೇ ಇತ್ತು, ತೀರ ಸಮೀಪ ದಲ್ಲೇ. ನಿಶ್ಚಲವಾಗಿ ನಿಂತಿದ್ದಿತು. ಅದು ನೆಲಕ್ಕೆ ಬಡಿಯಲು ತನ್ನ ಪುಟ್ಟ ಮುಂಗಾಲನ್ನು ಎತ್ತಿತ್ತು. ಆ ಕಾಲಿನಲ್ಲಿ ಬೆಳ್ಳಿಯ ಗೊರಸು ಮಿರುಗುತ್ತಿದ್ದಿತು. ಅದರ ಕೊಂಬುಗಳು ಐದು ಕವಲುಗಳನ್ನು ಹೊಂದಿದ್ದವು. ದರ್‍ಯೋಂಕಳಿಗೆ ಏನು ಮಾಡಬೇಕೆಂದೇ ತೋಚ ಲಿಲ್ಲ. ಆದ್ದರಿಂದ ಅವಳು ಅದನ್ನು ಸಾಮಾನ್ಯ ಮೇಕೆ ಅಥವಾ ಹೋತವನ್ನು ಕರೆಯು ವಂತೆ ಕರೆದಳು.


ಆ ಹೋತ ಹೇಗೆ ನಕ್ಕಿತು! ಆಮೇಲೆ ಅದು ತಿರುಗಿ ಬಯಲಿನ ಮಧ್ಯದಿಂದ ಓಡಿ ಹೋಯಿತು. ದರ್‍ಯೋಂಕ ಗುಡಿಸಿಲಿಗೆ ಹಿಂದಿರುಗಿ ತಾನು ಕಂಡುದೆಲ್ಲವನ್ನೂ ಬೆಕ್ಕಿಗೆ ತಿಳಿಸಿದಳು:

"ನಾನು ಬೆಳ್ಳಿಯ ಪುಟ್ಟ ಗೊರಸಿನ ಹೋತವನ್ನು ಕಂಡೆ. ಅದರ ಐದು ಕವಲು ಕೊಂಬುಗಳನ್ನು ಕಂಡೆ, ಅದರ ಪುಟ್ಟ ಗೊರಸನ್ನು ಕಂಡೆ. ಆದರೆ ಅದು ತನ್ನ ಪುಟ್ಟ ಕಾಲನ್ನು ನೆಲಕ್ಕೆ ಬಡಿದು ಪ್ರಶಸ್ತ ಶಿಲೆಗಳನ್ನು ಹಿಂದೆ ಬಿಡುವುದನ್ನು ಮಾತ್ರ ಕಾಣ ಲಿಲ್ಲ. ಅದನ್ನು ಅದು ಮುಂದಿನ ಬಾರಿ ತೋರಿಸಲಿರುವುದು."

ಬೆಕ್ಕು ಎಂದಿನಂತೆ ಹಾಡಿತು: "ಸ್-ಸರಿ! ನೀನು ಹೇಳಿದ್ದು ಸ್-ಸರಿ!"

ಮೂರನೆಯ ದಿನವೂ ಕಳೆಯಿತು. ಇನ್ನೂ ಕೊಕೊವಾನ್ಯ ಬರುವ ಸುಳಿವೇ ಇಲ್ಲ. ದರ್‍ಯೋಂಕಳ ಮುಖದ ಮೇಲೆ ವಿಷಾದ ಅಂಜಿಕೆಗಳ ಛಾಯೆ ಮೂಡಿತು. ಸ್ವಲ್ಪ ಅತ್ತೂ ಅತ್ತಳು. ಬೆಕ್ಕಿನ ಜೊತೆಗೆ ಮಾತನಾಡ ಬಯಸಿದಳು. ಆದರೆ ಅದು ಎಲ್ಲೋ ಹೊರಟು ಹೋಗಿತ್ತು. ಆಗ ದರ್‍ಯೋಂಕಳಿಗೆ ನಿಜಕ್ಕೂ ಗಾಬರಿಯಾಯಿತು. ಬೆಕ್ಕಿಗಾಗಿ ಹುಡುಕಲು ಗುಡಿಸಿಲಿನಿಂದ ಹೊರಕ್ಕೆ ಓಡಿ ಬಂದಳು.

ಅದೊಂದು ಬೆಳುದಿಂಗಳ ರಾತ್ರಿಯಾಗಿತ್ತು. ಆಕಾಶದಲ್ಲಿ ಪೂರ್ಣ ಚಂದ್ರ ತೂಗಿ ನಿಂತಿದ್ದ. ದರ್‍ಯೋಂಕ ಸುತ್ತ ನೋಡಿದಳು. ಬೆಕ್ಕು ಅಲ್ಲೇ ಸಮೀಪದಲ್ಲೇ



ಬಯಲಿನಲ್ಲಿ ಕುಳಿತಿತ್ತು. ಅದರ ಮುಂದೆ ಆ ಹೋತ ನಿಂತಿತ್ತು. ಅದು ಪುಟ್ಟ ಕಾಲನ್ನು ಎತ್ತಿತ್ತು. ಅದರ ಮೇಲೆ ಬೆಳ್ಳಿಯ ಪುಟ್ಟ ಗೊರಸು ಹೊಳೆಯುತ್ತಿತ್ತು.

ಬೆಕ್ಕು ತನ್ನ ತಲೆದೂಗುತ್ತಿತ್ತು. ಹೋತವೂ ಹಾಗೆಯೇ ಮಾಡುತ್ತಿತ್ತು, ಎರಡೂ ಮಾತುಕತೆ ನಡೆಸುತ್ತಿವೆಯೇನೋ ಅನ್ನುವಂತೆ. ಆಮೇಲೆ ಅವು ಮಂಜಿನ ಮೇಲೆ ಓಡಾಡ ತೊಡಗಿದವು. ಹೋತ ಒಮ್ಮೆ ಇತ್ತ ಒಮ್ಮೆ ಅತ್ತ ಓಡಿ ಹೋಗು ತ್ತಿತ್ತು, ತನ್ನ ಪುಟ್ಟ ಗೊರಸಿನಿಂದ ನೆಲ ಬಡಿಯುತ್ತಿತ್ತು. ಬೆಕ್ಕು ಅದರ ಬಳಿಗೆ ಬಂದರೆ, ಅದು ಇನ್ನೂ ದೂರಕ್ಕೆ ಓಡಿ, ಮತ್ತೆ ತನ್ನ ಪುಟ್ಟ ಗೊರಸಿನಿಂದ ನೆಲ ಬಡಿಯುತ್ತಿತ್ತು.

ಹೀಗೆ ಅವು ಬಹಳ ಹೊತ್ತು ಬಯಲಿನಲ್ಲಿ ಓಡಾಡಿ ಆಮೇಲೆ ದೂರದಲ್ಲಿ ಕಣ್ಮರೆಯಾದವು. ಆಮೇಲೆ ಅವು ಮತ್ತೆ ಗುಡಿಸಿಲಿಗೆ ತೀರ ಸಮೀಪ ಬಂದವು.

ಹೋತ ಗುಡಿಸಿಲಿನ ಮೇಲಕ್ಕೆ ಹಾರಿ ಹೋಗಿ ತನ್ನ ಬೆಳ್ಳಿಯ ಪುಟ್ಟ ಗೊರಸನ್ನು ಬಡಿಯ ತೊಡಗಿತು. ಅದರಿಂದ ಪ್ರಶಸ್ತ ಶಿಲೆಗಳು – ಕೆಂಪು, ಹಸುರು, ತೆಳು ನೀಲಿ ಹಾಗೂ ದಟ್ಟ ನೀಲಿ ಪ್ರಶಸ್ತ ಶಿಲೆಗಳು – ಕಿಡಿಗಳಂತೆ ಹಾರ ತೊಡಗಿದವು. ಅವು ನಾನಾ ರೀತಿಯವಾಗಿದ್ದವು, ನಾನಾ ವರ್ಣದವಾಗಿದ್ದವು.

ಆ ಹೊತ್ತಿಗೆ ಸರಿಯಾಗಿ ಕೊಕೊವಾನ್ಯ ಹಿಂದಿರುಗಿದ. ಅವನಿಗೆ ತನ್ನ ಗುಡಿಸಿಲಿನ ಗುರುತೇ ಸಿಗಲಿಲ್ಲ. ಅದು ಪ್ರಶಸ್ತ ಶಿಲೆಗಳಿಂದ ಮುಚ್ಚಿಹೋಗಿತ್ತು. ಅವು ಥಳಥಳಿ ಸುತ್ತಿದ್ದವು. ನಾನಾ ವರ್ಣಗಳಿಂದ ಕಂಗೊಳಿಸುತ್ತಿದ್ದವು. ಮತ್ತೆ ಹೋತ ಅಲ್ಲೇ ನಿಂತಿ ದ್ದಿತು, ಮೇಲುಗಡೆ, ತನ್ನ ಬೆಳ್ಳಿಯ ಪುಟ್ಟ ಗೊರಸಿನಿಂದ ಬಡಿಯುತ್ತ. ಪ್ರಶಸ್ತ ಶಿಲೆಗಳು ಅದರಿಂದ ಸತತವಾಗಿ ಉರುಳಿ ಬೀಳುತ್ತಿದ್ದವು.

ಇದ್ದಕ್ಕಿದ್ದಂತೆ ಬೆಕ್ಕೂ ಮೇಲಕ್ಕೆ ಹಾರಿ ಹೋಗಿ ಆ ಹೋತದ ಪಕ್ಕದಲ್ಲಿ ಗಟ್ಟಿ ಯಾಗಿ ಪರ್‌ಗುಟ್ಟುತ್ತ ನಿಂತಿತು. ಆಮೇಲೆ ಎಲ್ಲ ಮಾಯ – ಬೆಕ್ಕೂ ಇಲ್ಲ, ಬೆಳ್ಳಿಯ ಪುಟ್ಟ ಗೊರಸಿನ ಹೋತವೂ ಇಲ್ಲ.

ಕೊಕೊವಾನ್ಯ ತನ್ನ ಟೋಪಿ ತುಂಬ ಪ್ರಶಸ್ತ ಶಿಲೆಗಳನ್ನು ಬಾಚಿ ತುಂಬಿ ಕೊಂಡ. ಆದರೆ ದರ್‍ಯೋಂಕ ಅವನನ್ನು ಬೇಡಿಕೊಂಡಳು: “ಅವನ್ನು ಮತ್ತೆ ಮುಟ್ಟ ಬೇಡ, ಅಜ್ಜ ! ಅವನ್ನು ಅವು ಇದ್ದ ಹಾಗೆಯೇ ನಾಳೆ ಬೆಳಿಗ್ಗೆ ನೋಡಬೇಕೂಂತ ನನಗೆ ಆಸೆ.”



ಕೊಕೊವಾನ್ಯ ಅವಳು ಹೇಳಿದಂತೆಯೇ ಮಾಡಿದ. ಆದರೆ ಬೆಳಕು ಹರಿಯುವ ಮುನ್ನ ಭಾರಿ ಮಂಜು ಬಿದ್ದು ಎಲ್ಲವನ್ನೂ ಮುಚ್ಚಿಬಿಟ್ಟಿತು.

ಆಮೇಲೆ ಅವರು ಮಂಜೆಲ್ಲವನ್ನೂ ಗುಡಿಸಿ ಹಾಕಿದರು. ಆದರೆ ಅವರಿಗೆ ಏನೂ ಕಾಣಲಿಲ್ಲ. ಆದರೂ ಅವರ ಅದೃಷ್ಟ ಅಷ್ಟು ಕೆಟ್ಟುದೇನೂ ಆಗಿರಲಿಲ್ಲವೆನ್ನಿ. ಎಷ್ಟೇ ಆಗಲಿ ಕೊಕೊವಾನ್ಯ ತನ್ನ ಟೋಪಿಯಲ್ಲಿ ಒಂದಿಷ್ಟು ಪ್ರಶಸ್ತ ಶಿಲೆಗಳನ್ನು ತುಂಬಿ ಕೊಂಡಿದ್ದನಲ್ಲ !

ಹೀಗೆ ಇದು ಮುಗಿಯಿತು, ಸಂತಸಕರವಾಗಿ. ಆದರೆ ಮುರ್ಯೋಂಕದ ವಿಷಯದಲ್ಲಷ್ಟೆ ದುಃಖವಾಯಿತು. ಅದು ಇನ್ನೆಂದಿಗೂ ಕಂಡುಬರಲಿಲ್ಲ. ಬೆಳ್ಳಿಯ ಪುಟ್ಟ ಗೊರಸಿನ ಹೋತವೂ ಅಷ್ಟೆ, ಮತ್ತೆ ಕಂಡುಬರಲೇ ಇಲ್ಲ. ಒಮ್ಮೆಯಾದರೂ ಬಂದಿದ್ದಿತಲ್ಲ. ಅಷ್ಟೇ ಸಾಕು.

ಆದರೆ ಅನಂತರ ಆ ಹೋತ ಓಡಾಡಿದ್ದ ಬಯಲಿನಲ್ಲಿ ಜನ ಆಗಾಗ್ಗೆ ಶಿಲೆಗಳನ್ನು ಕಾಣ ತೊಡಗಿದರು. ಅವುಗಳಲ್ಲಿ ಹೆಚ್ಚಿನವು ಪಚ್ಚೆ ಬಣ್ಣದವಾಗಿದ್ದವು. ಜನ ಅವನ್ನು 'ಕ್ರಿಸೊಲೈಟ್' (ಪಚ್ಚೆಮಣಿ) ಎಂದು ಕರೆದರು. ನೀವು ಅವನ್ನು ನೋಡಿದ್ದೀರ?

ಪಾವೆಲ್ ಬಜೋವ್ (1879–1950) ಯೂರೋಪು ಏಷ್ಯ ಗಳ ಗಡಿ ಪ್ರದೇಶದ ಪುರಾತನ ಉರಾಲ್ಸ್ ಪರ್ವತ ಪ್ರದೇಶಗಳಲ್ಲಿನ ಬಾಯಿಮಾತಿನ ಜಾನಪದ ಕಥೆಗಳನ್ನು ಬಹಳ ವರ್ಷಗಳ ವರೆಗೆ ಸಂಗ್ರಹಿಸಿ ಅಭ್ಯಾಸ ಮಾಡಿದ ಒಬ್ಬ ಹೆಸರಾಂತ ಸಾಹಿತಿ.

ಈ ದಂತಕಥೆಗಳನ್ನೇ ಆಧಾರವಾಗಿರಿಸಿಕೊಂಡು ಬಜೋವ್ ತಮ್ಮವೇ ಸ್ವಂತ ಕಥೆಗಳನ್ನು ರಚಿಸಿದ್ದಾರೆ. ಈ ಕಥೆಗಳಲ್ಲಿ ಅವರು ಕಾಲ್ಪನಿಕ ಘಟನೆಗಳ ಜೊತೆಗೆ ಜನರ ನಿಜ ಜೀವನದ ಘಟನೆಗಳನ್ನೂ ಕಲಾತ್ಮಕವಾಗಿ ಮೇಳೈಸಿದ್ದಾರೆ. ಪರ್ವತಗಳ ಸಂಪತ್ತಿನ ಸಂರಕ್ಷಕಿ ಯಾದ ತಾಮ್ರ ಬೆಟ್ಟದ ಒಡತಿ, ದುಷ್ಟರನ್ನು ಶಿಕ್ಷಿಸುವ ಶಿಷ್ಟರನ್ನು ರಕ್ಷಿಸುವ ದೈತ್ಯಾಕಾರದ ಬಂಗಾರದ ಘಟಸರ್ಪ, ಶುದ್ಧ ಹಾಗೂ ಒಳ್ಳೆಯ ಆತ್ಮದ ಜನರಿಗೆ ಮುತ್ತುರತ್ನಗಳ ಬಳುವಳಿ ನೀಡುವ ಬೆಳ್ಳಿಯ ಪುಟ್ಟ ಗೊರಸಿನ ಹೋತ – ಇವೇ ಅವರ ಕಥೆಗಳ ಪ್ರಧಾನ ಪಾತ್ರಗಳು.

ಈ ಮಿಥ್ಯ ಪಾತ್ರಗಳ ಜೊತೆಜೊತೆಗೇ ಸಾಮಾನ್ಯ ಜನರೂ ಕಾಣಿಸಿಕೊಳ್ಳುತ್ತಾರೆ. ತಮ್ಮ ಕಸುಬುಗಳಲ್ಲಿ ಕುಶಲರಾದವರು ಅವರ ಮಧ್ಯೆ ವಿಶೇಷ ಸ್ಥಾನ ಪಡೆದಿದ್ದಾರೆ. ಅವರು ಉರಾಲ್ಸ್ ಪರ್ವತಗಳ ಮಾಂತ್ರಿಕ ಶಕ್ತಿಗಳೊಂದಿಗೆ ಸ್ನೇಹದಿಂದಿರುತ್ತಾರೆ, ತಮ್ಮ ಕಸುಬಿನ ಎಲ್ಲ ರಹಸ್ಯಗಳನ್ನೂ ತಿಳಿದಿರುತ್ತಾರೆ, ಅಸಾಧಾರಣ ಸೌಂದರ್ಯದ ವಸ್ತುಗಳನ್ನು ರಚಿಸುವ ಸಾಮರ್ಥ್ಯ ಹೊಂದಿರುತ್ತಾರೆ. ಮತ್ತೆ ಸಾಮಾ ನ್ಯವಾಗಿ ಎಲ್ಲ ರಷ್ಯನ್ ರಮ್ಯ ಕಥೆಗಳಲ್ಲಿನಂತೆ ಈ ಕಥೆಗಳಲ್ಲೂ ಸತ್‌ಸ್ವಭಾವದ, ನಿಸ್ವಾರ್ಥರಾದ, ಚೆಲುವಿನಿಂದ ಕೂಡಿದ ಮಹಿ ಳೆಯರು ನೈಜ ಕಸುಬುದಾರರಿಗೆ ನೆರವಾಗುತ್ತಾರೆ.

П. Бажов
СЕРЕБРЯНОЕ КОПЫТЦЕ
на языке каннада

P. Bazhov
SILVER HOOF
in Kannada

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

ISBN 5-05-002155-3



ರಾದುಗ ಪ್ರಕಾಶನ
ಮಾಸ್ಕೋ

ISBN 5-05-002155-3